

# ಕುಮಾರ ಮತ್ತು ಸಂಸಾರ!

ಹೆಸರಿನಲ್ಲೇ ತಾರುಣ್ಯವನ್ನು ಹುದುಗಿಸಿಕೊಂಡಿರುವ ಸಿನಿಮಾ 'ಕಾಲೇಜು ಕುಮಾರ'. ಆದರೆ, ಈ ಸಿನಿಮಾ ತರುಣ ತರುಣಿಯರ ಕನವರಿಕೆಗಳ ಜೊತೆಗೆ ಕುಟುಂಬದ ಕಥೆಯನ್ನೂ ಹೇಳುತ್ತದಂತೆ. ತಂದೆ ಮತ್ತು ಮಗನ ನಡುವಿನ ಭಾವನಾತ್ಮಕ ಸಂಘರ್ಷದ ನಿರೂಪಣೆ ಚಿತ್ರದಲ್ಲಿದೆಯಂತೆ.

ಚಿತ್ರದಲ್ಲಿ ಎರಡು ತಲೆಮಾರುಗಳಿವೆ. ಒಂದು ತಲೆಮಾರನ್ನು ರವಿಶಂಕರ್ ಹಾಗು ಶ್ರುತಿ ಪ್ರತಿನಿಧಿಸಿದರೆ, ವಿಕ್ಕಿ ಹಾಗೂ ಸಂಯುಕ್ತಾ ಹೆಗಡೆ ಇನ್ನೊಂದು ಜೋಡಿ. ಈ ನಾಲ್ಕು ಪಾತ್ರಗಳನ್ನು ತಮ್ಮ ಸಿನಿಮಾದ ಆಧಾರಸ್ಥಂಭಗಳೆಂದು ನಿರ್ದೇಶಕ ಅಲೆಮಾರಿ ಸಂತು ಬಣ್ಣಿಸುತ್ತಾರೆ. 'ನಮ್ಮ ಚಿತ್ರದಲ್ಲಿ ಸಿದ್ಧ ಮಾದರಿಯ ನಾಯಕನಾಯಕಿ ಇಲ್ಲ. ಕಥೆಯೇ ಚಿತ್ರದ ನಾಯಕ' ಎನ್ನುತ್ತಾರೆ.

ಶ್ರುತಿ ಹಾಗೂ ರವಿಶಂಕರ್ ಇಬ್ಬರಿಗೂ ಈ ಸಿನಿಮಾ ವಿಶೇಷ ಅನುಭವ ನೀಡಿದೆ. ಕೌಟುಂಬಿಕ ಕಥನಗಳು ಅಪರೂಪವಾಗುತ್ತಿರುವ ಸಂದರ್ಭದಲ್ಲಿ, ಸಂಬಂಧಗಳ ತಾಕಲಾಟದ ಪಾತ್ರಗಳು ದೊರೆತಿರುವುದು ಅಪ್ಪಟ ಕಲಾವಿದದಾದ ಇಬ್ಬರಿಗೂ ಖುಷಿಕೊಟ್ಟಿದೆ.

ವಿಕ್ಕಿ ಹಾಗೂ ಸಂಯುಕ್ತಾ ಚಿತ್ರದ ಯುವಜೋಡಿ. 'ಕೆಂಡಸಂಪಿಗೆ' ಚಿತ್ರದ ಖ್ಯಾತಿಯ ವಿಕ್ಕಿಗೆ 'ಕಾಲೇಜು ಕುಮಾರ' ತಮ್ಮ ಪ್ರತಿಭೆಯ ಅನಾವರಣದ ಮತ್ತೊಂದು ಅವಕಾಶ ಎನ್ನಿಸಿದೆ. 'ಕಿರಿಕ್ ಪಾರ್ಟಿ' ಚಿತ್ರದ ಖ್ಯಾತಿಯ ಸಂಯುಕ್ತಾಗೆ ಈ ಸಿನಿಮಾದಲ್ಲಿ ಕೂಡ ರಫ್ ಅಂಟ್ ಟಫ್ ಪಾತ್ರ ಸಿಕ್ಕಿದೆ. ಹೊಡೆದಾಟದ ದೃಶ್ಯವೊಂದರಲ್ಲಿ ಕೂಡ ಅವರು ಭಾಗವಹಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆಯ ಗೀತೆಗಳು ಸಾಕಷ್ಟು ಸುದ್ದಿ ಮಾಡಿರುವುದು ಕೂಡ ಸಿನಿಮಾದ ಗೆಲುವಿನ ನಿರೀಕ್ಷೆಯನ್ನು ಚಿತ್ರತಂಡದಲ್ಲಿ ಹೆಚ್ಚಿಸಿದೆ.



# ಗ್ಲಾಮರಸ್ 'ನುಗ್ಗೇಕಾಯಿ'

ಎಸ್ತರ್ ನರೋನ ಮಂಗಳೂರಿನ ಹುಡುಗಿ. ಈಗಾಗಲೇ ಎರಡು ಸಿನಿಮಾಗಳಲ್ಲಿ ನಟಿಸಿದ್ದರೂ ಚಿತ್ರರಸಿಕರಿಗೆ ಅಷ್ಟೇನೂ ಪರಿಚಿತರಲ್ಲದ ಎಸ್ತರ್ ಅಭಿನಯದ ಮೂರನೇ ಕನ್ನಡ ಸಿನಿಮಾ 'ನುಗ್ಗೇಕಾಯಿ' ಈಗ ತೆರೆಕಾಣುತ್ತಿದೆ (ನ. 17). 'ಉಸಿರಿಗಿಂತ ನೀನೆ ಹತ್ತಿರ' ಹಾಗೂ 'ಲೋಕಲ್ ಟ್ರೈನ್' ಅವರ ಅಭಿನಯದ ಇನ್ನೆರಡು ಸಿನಿಮಾಗಳು.

'ನುಗ್ಗೇಕಾಯಿ' ವೇಣುಗೋಪಾಲ್ ನಿರ್ದೇಶನದ ಸಿನಿಮಾ. ನುಗ್ಗೇಕಾಯಿ ರುಚಿ ಹಾಗೂ ಪೌಷ್ಟಿಕಾಂಶಗಳಿಗೆ ಹೆಸರಾದ ತರಕಾರಿ. ರುಚಿಯ ಜೊತೆಗೆ ತಾರುಣ್ಯದ ಕಾಮನೆಗಳ ಜೊತೆಗೂ ನುಗ್ಗೇಕಾಯಿ ತಳಕು ಹಾಕಿಕೊಂಡಿದೆ. ಈ ವಿಶಿಷ್ಟ ತರಕಾರಿಯ ಗುಣಲಕ್ಷಣಗಳನ್ನು ಚಿತ್ರದ ನಾಯಕ ಪ್ರತಿನಿಧಿಸುತ್ತಾನಂತೆ. ಹಾಗಾಗಿ ಇದನ್ನು ನಾಯಕಪ್ರಧಾನ ಸಿನಿಮಾ ಎನ್ನಬಹುದು. ಸಾಮಾಜಿಕ ಜಾಲತಾಣಗಳು ಯುವಜನರ ಮೇಲೆ ದುಷ್ಪರಿಣಾಮ ಬೀರುವ ಕಥೆ ಚಿತ್ರದಲ್ಲಿದೆಯಂತೆ.

ನಾಯಕಪ್ರಧಾನ ಸಿನಿಮಾದಲ್ಲಿ ನಾಯಕಿಯ ಪಾತ್ರದ ಚೌಕಟ್ಟು ಸೀಮಿತವಾಗಿರುತ್ತದಲ್ಲವೇ? ಹಾಗೇನೂ ಇಲ್ಲ ಎನ್ನುವ ಎಸ್ತರ್, ಚಿತ್ರದಲ್ಲಿನ ತಮ್ಮ ಪಾತ್ರ ವಿಭಿನ್ನವಾಗಿದೆ ಎನ್ನುತ್ತಾರೆ. ಹಳ್ಳಿ ಹುಡುಗಿಯಾಗಿ ನಟಿಸಿರುವುದು ಅವರಿಗೆ ಖುಷಿಕೊಟ್ಟಿದೆ. ಅಲ್ಲದೆ, ಕನ್ನಡ ಸಿನಿಮಾಗಳ ಬಗ್ಗೆ ಅವರಿಗೆ ವಿಶೇಷ ಮೋಹವೂ ಇದೆ. ಎಸ್ತರ್ ಈಗಾಗಲೇ ಪರಭಾಷೆಯ ಚಿತ್ರಗಳಲ್ಲಿ ನಟಿಸಿದ್ದಾರೆ. ಕನ್ನಡ ಸಿನಿಮಾ ಅವರ ಪಾಲಿಗೆ ತವರಿನ ಕರೆ ಇದ್ದಂತೆ. ಹಾಗಾಗಿ ಕಥೆಗಿಂತಲೂ 'ಕನ್ನಡ ಚಿತ್ರ' ಎನ್ನುವ ವಿಶೇಷಣಕ್ಕೆ ಅವರು ಹೆಚ್ಚು ಒತ್ತು ನೀಡುತ್ತಾರೆ.

ಮಧುಸೂದನ್ 'ನುಗ್ಗೇಕಾಯಿ' ಚಿತ್ರದ ನಾಯಕ. ಮುಗ್ಧತೆ ಹಾಗೂ ತುಂಟತನ ಎರಡನ್ನೂ ಒಳಗೊಂಡ ಪಾತ್ರ ಅವರದಂತೆ. ಕ್ರಿಸ್ಟಿನಾಜಾಯ್, ನಯನಾ, ಸುಚೇಂದ್ರ ಪ್ರಸಾದ್, ಬಿರಾದರ್ ಹಾಗೂ ವರ್ಧನ್ ತಾರಾಗಣದಲ್ಲಿರುವ ಪ್ರಮುಖರು.